'ಅಂದರೇನು ರೀಮಾ? ಮದುವೆ ನಂತರ ನಮ್ಮ ಜೀವನ ಬದಲಾಗಬೇಕೇನು? ನಾವು ಹೀಗಿರುವಂತೇ ಆಗಲೂ ಇರಬಹುದಲ್ಲ?' ನನ್ನ ಧ್ವನಿ ಅವಳ ಅನಿರೀಕ್ಷಿತ ನಿರಾಕರಣೆಯಿಂದ ಆಘಾತಗೊಂಡು ಕಂಪಿಸುತ್ತಿತ್ತು.

'ಇದೇನಿದು ರವಿ? ನಡೆಯೋ ಮಾತು ಹೇಳು, ನೀನು ನನ್ನ ಲವರ್ ಬಾಯ್ ಅಂತಲೇ ಅಂದುಕೋ. ಆದರೆ, ಮದುವೆ ಅಂತ ಆಗುವ ವಿಚಾರ ಬಂದರೆ ನನ್ನ ಪ್ರಯಾರಿಟಿಗಳೇ ಬೇರೆ ಇವೆ. ನಿನ್ನಂತ ಹೋರಾಟಗಾರನನ್ನ ಮೆಚ್ಚಿಕೊಳ್ಳಬಹುದು. ಆದರೆ, ಮದುವೆ ಅಂತ ಬಂದಾಗ ನಾನು ಯೋಚಿಸಬೇಕಾಗುತ್ತೆ ರಾವಿ. ಪ್ರಾಕ್ಟಿಕಲ್ ಆಗಿ ಯೋಚ್ನೆ ಮಾಡಿನೋಡು. ಮದುವೆ ಅಂತಾದ ಮೇಲೆ ಬದುಕು ಇದೇ ಥರಾ ಇರಲ್ಲ. ಇವತ್ತು ನಿನ್ನ ಗೆಳತಿಯಾಗಿ ಇಷ್ಟ ಆಗ್ತಾ ಇರೋ ವಿಚಾರಗಳು ನಾಳೆ ಹೆಂಡತಿಯಾದ ಮೇಲೆ ನಂಗೆ ಇಷ್ಟವಾಗದೇ ಹೋಗಬಹುದು ಅದಕ್ಕೇ ಇದೆಲ್ಲ ಬೇಡ ರಾವಿ. ಹೀಗೇ ಇರುವ ಖುಷಿಯಾಗಿ. ಎಷ್ಟು ದಿನ ನಡೆಯುತ್ತೋ ನಡೀಲಿ. ನಡುವೆ ನಿಂಗೇನಾದ್ರೂ ಒಳ್ಳೆ ಹುಡುಗಿ ಸಿಕ್ಕಿದ್ರೆ ಮದ್ವೆಯಾಗು. ನಾನೂ ಅಷ್ಟೇ' ಅವಳು ತುಂಬ ಹೊತ್ತು ಮಾತಾಡುತ್ತಿದ್ದ ನೆನಪು. ಆದರೆ, ನನ್ನ ಕಿವಿಗೆ ಹೊಕ್ಕದ್ದು ಇಷ್ಟೇ. ಯಾವ ವಿಚಾರ ತಗೊಂಡರೂ ಓತಪ್ರೋತವಾಗಿ ಭಾಷಣ ಮಾಡುತ್ತಿದ್ದ ನಾನು ಅವಳೆದುರು ಮಾತು ಕಳೆದುಕೊಂಡು ಮೂಕನಾಗಿದ್ದೆ. ಮಾತಾಡುವುದಕ್ಕೆ ಇನ್ನೇನಾದರೂ ಇದೆ ಅಂತ ಅನಿಸಲೂ ಇಲ್ಲ. ಹಾಗಾದರೆ ನನ್ನೊಂದಿಗೆ ಅವಳು ಕಳೆದ ಆ ಇಂಟಿಮೇಟ್ ಕ್ಷಣಗಳಿಗೇನು ಅರ್ಥ? ಆ ಭಾವನೆಗಳು ನಿಜವಲ್ಲವೇ? ನನ್ನ ಪ್ರಶ್ನೆಗಳಿಗೆ ಅವಳು ಹಗುರಾಗಿ ನಕ್ಕು ಎದ್ದು ಹೋಗಿದ್ದಳು. 'ಡೋಂಟ್ ಬಿ ಸಿಲ್ಲಿ ರಾವಿ, ಗ್ರೋ ಅಪ್.'

ಅವತ್ತೂ ಹೀಗೇ ಇಂದಿನ ಈ ರಾತ್ರಿಯಂತೇ ತಾನು ನಿದ್ರಿಸದೇ ಒದ್ದಾಡಿದ್ದೆ. ಅವತ್ತು ಎಂದೂ ಇಲ್ಲದಂತೆ ಚಂದ್ರಾ ನೆನಪಾಗಿದ್ದಳು ಅವಳೊಂದಿಗೆ ಕಳೆದ ಕ್ಷಣಗಳಾದರೂ ಹೀಗೇ... ಅವತ್ತಿನ ಮಟ್ಟಿಗಿನ ಸಂತೋಷವಾಗಿದ್ದವು. ಅವಳನ್ನು ಅಷ್ಟೆಲ್ಲ ಹಚ್ಚಿಕೊಂಡವನಿಗೆ ಮದುವೆಯ ಕುರಿತಾದ ಸಣ್ಣ ಆಸೆಯಾದರೂ ಬಂದಿತ್ತೆ? ಹಾಗಾದರೆ ಅದಕ್ಕೂ ಇದಕ್ಕೂ ಏನು ವ್ಯತ್ಯಾಸವಾದಂತಾಯ್ತು? ಚಂದ್ರಾ ಒಮ್ಮೆ ಹೇಳಿದ್ದಳು, 'ನಿಮ್ಮನ್ನ ನಾನು ಪ್ರೀತಿಸ್ತೇನೆ.' ಅವಳನ್ನ ಅಪ್ಪಿಕೊಂಡು ನಾನೂ ಅಂದಿದ್ದೆ 'ನಂಗೂ ನೀನಂದ್ರೆ ಇಷ್ಟ ಚಂದ್ರಾ'.

ಇನ್ನೊಂದು ದಿನ 'ನಂಗೆ ಮನೆಯಲ್ಲಿ ಮದುವೆಗೆ ಹುಡುಗ ಹುಡುಕ್ತಾ ಇದ್ದಾರೆ' ಅನ್ನುತ್ತ ಬಿಕ್ಕಿದ್ದಳು. ನಾನು ನಿರ್ವಿಕಾರವಾಗಿ 'ಓ ಒಳ್ಳೆಯ ವಿಷಯ. ಆದ್ರೆ ಇನ್ಮುಂದೆ ಹೀಗೆಲ್ಲ ಸಿಗಲಿಕ್ಕಾಗಲ್ಲ ಅಲ್ವಾ? ಅದೇ ಒಂದು ಬೇಜಾರು' ಅಂದಿದ್ದೆ. ನನಗೆ ಅಷ್ಟೇ ಅನಿಸಿದ್ದು ಅವತ್ತು. ಆದರೆ, ಇವತ್ತು ಅದನ್ನ ನೆನೆದರೆ ಕರುಳು ನಿಡುಸುಯ್ಯುತ್ತದೆ. ಅದೇ ಮೊದಲ ಬಾರಿಗೆ ಅವಳು ಕಣ್ಣೀರಾಗಿದ್ದಳು.

ನಾನು ಒಂದಿಷ್ಟೂ ಅಳುಕದೆ 'ಅಳಬೇಡ ಚಂದ್ರಾ, ಎಲ್ಲ ಒಳ್ಳೇದಾಗುತ್ತೆ... ಮತ್ತೆ ಊರಿಗೆ ಬಂದಾಗ ಸಿಗ್ಲಿಕ್ಕೆ ಮರೀಬೇಡ ನೋಡು' ಅಂದು ಕೆನ್ನೆ ತಟ್ಟಿ ಕಳಿಸಿದ್ದೆ. ಹಾಗಂದವನನ್ನು ಒಮ್ಮೆ ನಿಷ್ಠುರವಾಗಿ ನೋಡಿದವಳು ಅವಳ ಮದುವೆಯ ತನಕವೂ ಮನೆಯತ್ತ ಸುಳಿದಿರಲಿಲ್ಲ. ಅವಳ ಮದುವೆ ಸುಸೂತ್ರವಾಗಿ ನಡೆದುಹೋಗಿತ್ತು. ಅವಳ ಗಂಡ ನಡೆದುಹೋಗುವಷ್ಟು ದೂರದ ಪಕ್ಕದೂರಲ್ಲಿ ಚಿಕ್ಕದೊಂದು ಮುರುಕು ಹೋಟೆಲು ನಡೆಸುತ್ತಿದ್ದ. ಯಾವುದೇ ವ್ಯಥೆಯಿಲ್ಲದೆ, ಬಿಂಕ ಬಿಗುಮಾನ ತೋರದೆ, ದೊಡ್ಡವರು ಹೇಳಿದ ಹಾಗೆ ಬಗ್ಗೆಂದರೆ ಬಗ್ಗಿ, ನಿಲ್ಲೆಂದರೆ ನಿಂತು ಮದುವೆ ಶಾಸ್ತ್ರ ಮುಗಿಸಿಕೊಂಡು ಹೋದ ಚಂದ್ರಾ ನಿಜಕ್ಕೂ ಅವತ್ತು ನನಗೆ ಅತ್ಯಂತ ದುರದೃಷ್ಟವಂತೆ ಅನಿಸಿದಳು. ಅದೇ ಸಮಯ ಖಂಡಿತಾವಾಗ್ಯು ಅವಳನ್ನು ಮದುವೆಯಾಗುವ ಚಿಕ್ಕ ಯೋಚನೆ ಕೂಡ ನನ್ನಲ್ಲಿ ಬಂದಿರಲಿಲ್ಲ. ಅದು ನನ್ನಿಂದ ಯಾವತ್ತಿಗೂ ಸಾಧ್ಯವೇ ಇಲ್ಲದ ವಿಷಯವಾಗಿತ್ತು. ಊರ